**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 228/2021**

**ಚಾ.ಸಾ.** 1

**ಪ್ರಾ.ಸಾ.** 1

**ದಿನಾಂಕಃ 05.06.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಚಿದಾನಂದ ಕರವೀರಪ್ಪನವರ |
| ತಂದೆಃ ಗಂಡನ ಹೆಸರು | ನಾಗಪ್ಪ |
| ಉದ್ಯೋಗ | ಎ ಎಸ್ ಐ |
| ವಯಸ್ಸು | 56 |
| ವಾಸಸ್ಥಳ | ಧಾರವಾಡ |

**ಪ್ರಾರಂಭ ಸಮಯಃ 12.26 ಪಿ. ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ನಾನು ಜೂನ್ 2016 ರಿಂದ ಜೂನ್ 2021 ರವರೆಗೆ ಕಲಘಟಗಿ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಹಾಗೂ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೆ.

ಸಾಕ್ಷಿಗೆ ದಿಃ16.05.2020 ರ ಪಂಚನಾಮೆ ಮತ್ತು ದೂರನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ1 ಮತ್ತು 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ1(ಎ) ಮತ್ತು ನಿಪಿ2(ಎ) ಎಂದು ಗುರುತಿಸಲಾಯಿತು. ಮಾದರಿಯ ಶೀಲು ಮತ್ತು ಸಹಿಗಳನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ3 ರಿಂದ 8 ಎಂದು ಗುರುತಿಸಲಾಯಿತು.

ದಿಃ16.05.2020 ರಂದು ಬೆಳಿಗ್ಗೆ 08.30 ಗಂಟೆ ಸಮಯಯಿಂದ ಚಾಸಾ.4 ರವರೊಂದಿಗೆ ನಾನು ಕಲಘಟಗಿ ಪಟ್ಟಣದಲ್ಲಿ ರಸ್ತೆ ಗಸ್ತಿನಲ್ಲಿ ಇದೆ. ನಾವು ಮಾಚಾಪುರ ಗ್ರಾಮದ ಬಳಿ ಇದ್ದಾಗ 11.00 ಗಂಟೆ ಸಮಯದಲ್ಲಿ ನನಗೆ ಒಂದು ಬಾತ್ಮಿ ಬಂದಿರುತ್ತದೆ. ಒಬ್ಬ ವ್ಯಕ್ತಿಯು ಅನಧೀಕೃತವಾಗಿ ತುಮರಿಕೊಪ್ಪ ರಸ್ತೆಯ ಬೇಗೂರ ಕ್ರಾಸ ಬಳಿ ಮದ್ಯವನ್ನು ತನ್ನ ದ್ವಿಚಕ್ರವಾಹನದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆಂದು ಬಾತ್ಮಿ ಬಂದಿತು. ಸದರಿ ಬಾತ್ಮಿಯ ವಿಚಾರವನ್ನು ನನ್ನ ಮೇಲಾಧಿಕಾರಿಗಳಿಗೆ ತಿಳಿಸಿ ಅವರ ಅನುಮತಿಯ ಮೇರೆಗೆ ನಾನು ಮತ್ತು ಚಾಸಾ.4 ರವರು ಮಾಚಾಪುರದ ಗ್ರಾಮದಲ್ಲಿದ್ದಂತಹ ಚಾಸಾ.2 ಮತ್ತು 3 ರವರನ್ನು ಕರೆದುಕೊಂಡು ಸದರಿಯವರಿಗೆ ಬಾತ್ಮಿ ವಿಷಯವನ್ನು ತಿಳಿಸಿ ಪಂಚರಾಗಿ ಸಹಕರಿಸಲು ಅವರು ಒಪ್ಪಿಕೊಂಡ ಮೇರೆಗೆ ಅವರೊಂದಿಗೆ ನಾವು ಘಟನಾ ಸ್ಥಳಕ್ಕೆ ನಮ್ಮ ಸರ್ಕಾರಿ ಜೀಪನಲ್ಲಿ ಹೊರಟೆವು.

ನಾವು ಘಟನಾ ಸ್ಥಳಕ್ಕೆ 11.30 ಕ್ಕೆ ಹೋದೆವು. ನಮ್ಮ ಜೀಪನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ನಾವು ಮರೆಯಲ್ಲಿ ನಿಂತು ವಾಚ ಮಾಡತ್ತಿದ್ದಾಗ ಒಬ್ಬ ಅಸಾಮಿ ಒಂದು ಚೀಲದಲ್ಲಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಮತ್ತು ಸಾರ್ವಜನಿಕರು ಹೋಗಿ ಬರುವುದು ನಮಗೆ ಕಂಡು ಬಂದಿತು. ಸದರಿ ವಿಚಾರವನ್ನು ಪಂಚರಿಗೆ ತಿಳಿಸಿ ನಂತರ ಸದರಿ ವ್ಯಕ್ತಿಯ ಮೇಲೆ ನಮಗೆ ಅನುಮಾನ ಬಂದು ಆತನನ್ನು ಸುತ್ತುವರೆದು ದಾಳಿ ಮಾಡಿದೆವು. ಸದರಿ ವ್ಯಕ್ತಿಯು ತನ್ನ ವಾಹನ ಮತ್ತು ಮಾಲನ್ನು ಸ್ಥಳದಲ್ಲೇ ಬಿಟ್ಟು ಪಕ್ಕದಲ್ಲಿದ್ದಂತಹ ಜಮೀನಿನ ಮುಖಾಂತರ ಹೋಡಿ ಹೋದನು. ನಮ್ಮ ಪ್ರಯತ್ನದ ಹೊರತಾಗಿಯು ಸದರಿ ವ್ಯಕ್ತಿ ಹೋಡಿದನು. ನಂತರ ಸ್ಥಳಕ್ಕೆ ಬಂದು ಪರಿಶೀಲಿಸಲಾಗಿ ಅಲ್ಲಿ ಒಂದು ಚೀಲವಿತ್ತು, ಸದರಿ ಚೀಲವನ್ನು ಪಂಚರ ಸಮಕ್ಷಮ ತೆರೆದು ನೋಡಲಾಗಿ 90 ಎಮ್ ಎಲ್ ನ 43 ಓರಿಜನಲ್ ಚಾಯ್ಸ ಡಿಲಕ್ಸ ವಿಸ್ಕಿ ಟೆಟ್ರಾ ಪ್ಯಾಕೇಟಗಳು ಇರುವುದು ಕಂಡು ಬಂದಿತು. ಸ್ಥಳದಲ್ಲಿದ್ದಂತಹ ವಾಹನವನ್ನು ಪರಿಶೀಲಿಸಲಾಗಿ ಅದು ಹೊಂಡಾ ಡ್ರೀಮ್ ಯುಗ, ಅದರ ನೋಂದಣಿ ಸಂಖ್ಯೆ ಕೆ ಎ 27-ಇ ಬಿ 0910 ಆಗಿತ್ತು. ಸದರಿ ಸಾರ್ವಜನಿಕ ಸ್ಥಳದಲ್ಲಿ ಇದ್ದಂತಹ ಕೆಲವು ಸಾರ್ವಜನಿಕರನ್ನು ಕೇಳಲಾಗಿ ಹೋಡಿ ಹೋದಂತಹ ಅಪಾದಿತನ ಹೆಸರು ದೇವರಾಜ ತಂದೆ ದೊಡ್ಡಪ್ಪ ಲಮಾಣಿ ಎಂದು ತಿಳಿಸಿದರು.

ನಂತರ ಸದರಿ ಮಾಲನ್ನು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಸದರಿ ಮಾಲನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಬಿಳಿ ಬಟ್ಟೆಯಲ್ಲಿ ಸುತ್ತಿ ಇಲಾಖಾ ಸೀಲನ್ನು ಹಾಕಲಾಯಿತು. ನಿಪಿ1 ನ್ನು ಬೆಳಿಗ್ಗೆ 11.50 ರಿಂದ 12.50 ರವರೆಗೆ ಪಂಚರು ಹೇಳಿದಂತೆ ಬರೆಯಲಾಯಿತು. ನಂತರ ಪಂಚರ ಸಹಿಗಳನ್ನು ಪಡೆದುಕೊಂಡೆನು.

ನಂತರ ನಾವು ಮಾಲೀನೊಂದಿಗೆ ಪೊಲೀಸ್ ಠಾಣೆಗೆ ಬಂದು ಚಾಸಾ.7 ರವರಿಗೆ ನಿಪಿ1 ರಂತೆ ನಾನು ದೂರು ದಾಖಲಿಸಿದೆನು. ನಿಪಿ2 ಮತ್ತು ಮಾಲನ್ನು ಚಾಸಾ.7 ರವರಿಗೆ ನಿವೇದಿಸಿಕೊಂಡೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದು, ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ಸದರಿ ದಿನ ನಾನು ದಾಳಿ ಮಾಡಿದಾಗ ಹೋಡಿ ಹೋದಂತಹ ವ್ಯಕ್ತಿಯು ಈ ದಿನ ನ್ಯಾಯಾಲಯದ ಮುಂದಿರುವ ಅಪಾದಿತನು ಆಗಿರುತ್ತಾನೆ. ಸದರಿ ವಾಹನವನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಅಪಾದಿತನ ಪರ ಶ್ರೀ ಕೆಬಿಜಿ ವಕೀಲರಿಂದ**

ನಿಪಿ1 ನ್ನು ಘಟನಾ ಸ್ಥಳದಲ್ಲಿ ಕಂಪ್ಯೂಟರನಲ್ಲಿ ಬೆರಳಚ್ಚು ಮಾಡಿದೆ. ನಿಪಿ1 ನ್ನು ಠಾಣೆಗೆ ಬಂದು ಮುದ್ರಣ ಮಾಡಲಾಯಿತು. ಪಂಚರನ್ನು 11.00 ಗಂಟೆಗೆ ಕರೆದುಕೊಂಡು ಹೋದೆ. ಪಂಚರನ್ನು ಕರೆದುಕೊಂಡ ಸ್ಥಳದಿಂದ ಘಟನಾ ಸ್ಥಳವು ಸುಮಾರು 3 ಕಿ ಮೀ ದೂರದಲ್ಲಿದೆ. ಗುನ್ನಾ ಸ್ಥಳದಲ್ಲಿ ಮನೆ ಇದ್ದು ಸಾಕಷ್ಟು ವಾಹನಗಳು ಸಂಚರಿಸುತ್ತವೆ ಅಂದರೆ ಸರಿಯಲ್ಲ. ನಾನು ಗುನ್ನಾ ಸ್ಥಳಕ್ಕೆ ಹೋಗಿದ್ದೆ ಎಂದು ಹೇಳಿರುವುದು ಸುಳ್ಳು ಅಂದರೆ ಸರಿಯಲ್ಲ. ಅಪಾದಿತನಿಗೂ ಮತ್ತು ಮು ಮಾ1 ಕ್ಕೂ ಯಾವೂದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ. ಅಂಕಿ ಸಂಖ್ಯೆಗಾಗಿ ಅಪಾದಿತನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗಲು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಠಾಣೆಯಲ್ಲಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ1 ಮತ್ತು 2 ನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇವೆ

ಅಂದರೆ ಸರಿಯಲ್ಲ. ಅಪಾದಿತನಿಗೆ ಸೇರಿದ ದ್ವಿ ಚಕ್ರ ವಾಹನವನ್ನು ತೆಗೆದುಕೊಂಡು ಬಂದು ಆತನ ಮೇಲೆ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇವೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**